CC –467/2016
PW –10
CW –11

ದಿನಾಂಕಃ 01.07.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ– ಆರೋಪಿಗಳ ಪರ ಶ್ರೀ.ಎಸ್ ಎನ್ ಪಿ ವಕೀಲರಿಂದಃ–

ಆರೋಪಿಗಳು, ದೂರುದಾರರು ಹಾಗೂ ನಾವು ಸಂಬಂಧಿಕರು ಎಂದರೆ ಸರಿ. 2 ನೇ ಆರೋಪಿಯ ಮನೆಯ ಮುಂದೆ ರಸ್ತೆ ಮತ್ತು ಧ್ವಜಸ್ತಂಭಕ್ಕೆ ಸಂಬಂಧಿಸಿದಂತೆ ಸಿವಿಲ್ ವ್ಯಾಜ್ಯ ನಡೆಯುತ್ತಿದೆ ಎಂದರೆ ಸರಿ. ಆರೋಪಿಗಳು ನಮ್ಮ ವಿರುದ್ಧ ವಿಭಾಗ ಕೋರಿ ಹರಿಹರ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ನಮ್ಮ ಮತ್ತು ಆರೋಪಿಗಳ ನಡುವೆ ಸುಮಾರು 15 ವರ್ಷಗಳಿಂದಲೂ ಆಸ್ತಿ ಸಂಬಂಧ ವ್ಯಾಜ್ಯ ಇದೆ ಎಂದರೆ ಸರಿ. ನಾನು ಮತ್ತು ಚಾಸಾ 1 ರವರು ಒಂದು ಕಡೆ, ಆರೋಪಿಗಳು ಮತ್ತೊಂದು ಕಡೆ ಎಂದರೆ ಸರಿ. ನಡೆದಿದೆ ಎನ್ನಲಾದ ಘಟನಾ ದಿನಾಂಕ, ತಿಂಗಳು ಯಾವುದು ಎಂದರೆ ಗೊತ್ತಿಲ್ಲ. ಗಲಾಟೆಯಾದ ಎಷ್ಟು ಸಮಯಕ್ಕೆ ನಾನು ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸಾಕ್ಷಿಯು ಸುಮಾರು ಮುಕ್ಕಾಲು ಗಂಟೆಯ ನಂತರ ಎಂದು ನುಡಿಯುತ್ತಾರೆ. ಯಾರು ಯಾರಿಗೆ ಹೊಡೆದರು ಹಾಗೂ ಬೈದರು ಎಂದರೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ಆರೋಪಿಗಳು ಚಾಸಾ 1, 4 ಮತ್ತು 5 ರವರೊಂದಿಗೆ ಗಲಾಟೆ ಮಾಡಿಲ್ಲ, ಬೈದಿಲ್ಲ, ಹೊಡೆದಿಲ್ಲ, ಮುದ್ದೆ ಮಾಲುಗಳಿಂದ ಹಲ್ಲೆ ಮಾಡಿಲ್ಲ , ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿ. ಆರೋಪಿಗಳಿಗೆ ಜಮೀನಿನಲ್ಲಿ ಭಾಗ ಹೋಗಬಾರದು ಎಂದು ನಾನು ಮತ್ತು ದೂರುದಾರರು ಈ ಮುಂಚಿನಿಂದಲೂ ಆರೋಪಿಗಳ ಮೇಲೆ ಗಲಾಟೆ ಮಾಡುತ್ತಾ ದೂರುಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ನಡೆಯದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.